# ಸಕಲೇಶಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

ಸಿ ಸಿ ಸಂಖ್ಯೆ:272-2025:

ಫಿರ್ಯಾದುದಾರರು ಃ ರಾಜ್ಯದ ಪರವಾಗಿ

ನಗರ ಪೊಲೀಸ್ ಠಾಣೆ

-ವಿರುದ್ದ-

ಆರೋಪಿತರು ಃ ಮಧನ್ ಕೆ.ಪಿ ಮತ್ತು ಇನ್ನೊಬ್ಬರು

**:ದೋಷಾರೋಪಣೆ :**

ನಾನು ಶ್ರೀ ಜಯಪ್ರಕಾಶ್.ವಿ. ಬಿ.ಎ., ಎಲ್.ಎಲ್.ಬಿ., ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ನಾನು ಆರೋಪಿತರಾದ

ಆ.1 ಮಧನ್ ಕೆ.ಪಿ ಬಿನ್ ಪೂಮಚ್ಚ, ವಯ್ಯಸ್ಸು 32 ವರ್ಷ, ಚಾಲಕ ವೃತ್ತಿ, ಗ್ರೀನ್ ಲೈನ್ ಬಸ್ ಚಾಲಕ, ವಾಸ ಬಾಷಿರ್ ಗುಪ್ಪೆ ಗ್ರಾಮ, ಕುಶಾಲನ್, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ಆ.2 ವೆಂಕಟೇಶ ಹೆಚ್ ಬಿನ್ ಹನುಮಂತ, ವಯ್ಯಸ್ಸು 27 ವರ್ಷ, ಬಸ್ ತೊಳೆಯುವ ಕೆಲಸ, ಗ್ರೀನ್ ಲೈನ್ ಬಸ್ ಕ್ಲೀನರ್, ವಾಸ ಮಲ್ಲನಕುಪ್ಪೆ ಗ್ರಾಮ, ಅಡಕೂರು , ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ನಿಮಗೆ ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆಃ

1. ದಿನಾಂಕಃ 29-03-2025 ರಂದು ರಾತ್ರಿ ಸುಮಾರು 10-00 ಗಂಟೆ ಸಮಯದಲ್ಲಿ ಚಾ.ಸಾ 1 ಮೊಹಮದ್ ಶರೀಫ್ ಹಾಗೂ ಚಾ.ಸಾ 2 ಅಬ್ದುಲ್ ಸತ್ತಾರ್ ಇವರುಗಳು

ಕಾರಿನಲ್ಲಿ ಬೆಂಗಳೂರಿನಿಂದ ರಂಜಾನ್ ಹಬ್ಬದ ಪ್ರಯುಕ್ತ ಬೆಳ್ತಂಗಡಿಯಲ್ಲಿರುವ ಅವರ ಮನೆಗೆ ಬರುವುದಕ್ಕಾಗಿ ಹೊರಟು ದಿನಾಂಕ 29/30-03-2025 ಬೆಳಗಿನ ಜಾವ 04-02 ಗಂಟೆಯ ಸಮಯದಲ್ಲಿ ಸಕಲೇಶಪುರ ತಾಲ್ಲೂಕು, ದೋಣಿಗಾಲ್ ಗ್ರಾಮದಿಂದ ಸ್ವಲ್ಪ ಮುಂದೆ ಚಾ.ಸಾ 1 ರವರು ಕಾರನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಬಿ.ಎಂ ರಸ್ತೆಯ ತಿರುವು ರಸ್ತೆಯ ಬದಿಯಲ್ಲಿ ಲಾರಿಯೊಂದು ಬಿದ್ದು ವಾಹನಗಳು ಮುಂದೆ ಚಲಿಸದಂತೆ ರಸ್ತೆ ತಡೆ ಆಗಿದ್ದರಿಂದ ಅದರ ಬಗ್ಗೆ ಕುತೂಹಲದಿಂದ ವಾಸ್ತವಾಂಶವನ್ನು ತಿಳಿಯುವ ಸಲುವಾಗಿ ಚಾ.ಸಾ 1 ಮತ್ತು 2 ರವರು ಕಾರನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ ಕಾರಿನಿಂದ ಇಳಿದು ನೋಡುತ್ತಿದ್ದ ಸಮಯದಲ್ಲಿ ಸಕಲೇಶಪುರ ಕಡೆಯಿಂದ ಮೇಲ್ಕಂಡ ಆರೋಪಿಗಳ ಪೈಕಿ ಎಂದನೇ ಆರೋಪಿಯಾದ ನೀವು ಕೆಎ-51-ಎ.ಎಫ್-3115 ರ ಸಂಖ್ಯೆಯ ಗ್ರೀನ್ ಲೈನ್ ಖಾಸಗಿ ಬಸ್ಸನ್ನು ಜೋರಾಗಿ ಓಡಿಸಿಕೊಂಡು ಬಂದು ಇತರೆ ವಾಹನಗಳು ಮುಂದೆ ಚಲಿಸಲು ಸಾಧ್ಯವಾಗದಂತೆ ಬಂದು ಬಸ್ಸನ್ನು ನಿಲ್ಲಿಸಿ ಮೇಲ್ಕಂಡ ಆರೋಪಿಗಳಾದ ನೀವುಗಳಿಬ್ಬರು ಸಮಾನ ಉದ್ದೇಶವನ್ನು ಹೊಂದಿ ಚಾ.ಸಾ 1 ರವರ ಬಳಿ ಬಂದು ಏನೋ ಲೋಫರ್ ಸೂಳೆಮಗನೆ ರಸ್ತೆಯಲ್ಲಿ ಏಕೆ ನಿಂತಿದ್ದೀಯೋ ನಿನ್ನ ತಾಯಿನಾಕ್ಯಾಯ, ನಿನ್ನ ಅಕ್ಕನಾಕ್ಯಾಯ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ ಅವಮಾನಪಡಿಸಿದ್ದು ಇದರಿಂದ ಚಾ.ಸಾ 1 ರವರು ಉದ್ರೇಕಗೊಂಡು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡುವಂತೆ ಮಾಡಿದ್ದು , ಆ ನಿಮಿತ್ತದಿಂದ ಮೇಲ್ಕಂಡ ಆರೋೀತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹ ಕಲಂ.3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ,ಹಾಗೂ ಸ್ಥಳದಲ್ಲಿ ಮೇಲ್ಕಂಡ ಆರೋಪಿರಾದ ನೀವುಗಳು ಚಾ.ಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದೂ ಅಲ್ಲದೇ ಮೇಲ್ಕಂಡ ಆರೋಪಿಗಳಾದ ನಿಮ್ಮಗಳು ಪೈಕಿ ಒಂದನೇ ಆರೋಪಿಯಾದ ನೀವು ಸಮಾನ ಉದ್ದೇಶವನ್ನು ಹೊಂದಿ ಏಕಾಏಕಿ ನಿಮ್ಮ ಕೈಗಳಿಂದ ಚಾ.ಸಾ 1 ರವರ ಮೈಕೈಗೆ ಸ್ವಯಿಚ್ಛೆಯಿಂದ ಹೊಡೆಯುತ್ತಿದ್ದ ಸಂದರ್ಭದಲ್ಲಿ ನಿಮ್ಮಗಳ ಪೈಕಿ ಎರಡನೇ ಆರೋಪಿಯಾದ ನೀವು ಚಾ.ಸಾ 1 ರವರಿಗೆ ಹೊಡೆಯಲು ಬಂದಾಗ ಅದೇ

ಸಮಯಕ್ಕೆ ಜಗಳವನ್ನು ಬಿಡಿಸಲು ಬಂದ ಚಾ.ಸಾ 2 ರವರಿಗೆ ಮೇಲ್ಕಂಡ ಆರೋಪಿಗಳಾದ ನೀವುಗಳಿಬ್ಬರೂ ಸೇರಿ ಚಾ.ಸಾ 2 ರವರಿಗೆ ಕೈಗಳಿಂದ ಮುಖಕ್ಕೆ ಮೂಗಿಗೆ ಸ್ವಯಿಚ್ಛೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು , ಆ ನಿಮಿತ್ತದಿಂದ ಮೇಲ್ಕಂಡ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹ ಕಲಂ.3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

**ಆರೋಪಿಗಳ ಉತ್ತರ**

**1. ಮೇಲಿನಂತೆ ಆರೋಪಿಸಿದ ದೋಷಾರೋಪಣೆಗಳನ್ನು ಓದಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೇ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯನ್ನು ಬಯಸುತ್ತೀರಾ?**

ಉ.

**ಮೇಲಿನಂತೆ ಆರೋಪಗಳನ್ನು ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಆವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂಬುದಾಗಿ ದೃಢೀಕರಿಸಲಾಗಿದೆ.**

ಸ್ಥಳಃಸಕಲೇಶಪುರ

ದಿನಾಂಕಃ 22-09-2025

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ರವರ ನ್ಯಾಯಾಲಯ,
ಸಕಲೇಶಪುರ

ಆರೋಪಿಃ

ಆ.1

ಆ.2